ಮುಂಜಾನೆ ಮಾತು
ಭವಿಷ್ಯದ ಫಲ ನಿರ್ಣಯವಾಗುವುದು ನಮ್ಮ ಇಂದಿನ ಕೆಲಸದ ಯೋಗ್ಯತೆಯ ಮೇಲೆ. ಇಂದಿನ ನಮ್ಮ ಪ್ರತಿ ಕೆಲಸವೂ ಸಮರ್ಪಕವಾಗಿರಲಿ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ. 1 ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 7 ● ಸಂಚಿಕೆ 184
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 2 ಅಕ್ಟೋಬರ್ 2018 | ಮಂಗಳವಾರ

CENTRAL LIBRARY

# ನಿಟ್ಟೆ, ಸಹ್ಯಾದ್ರಿ ಕಾಲೇಜುಗಳಿಗೆ ಚಾಂಪಿಯನ್‌ಶಿಪ್

ವಿಜಯವಾಣಿ ಚಿತ್ರ



ವಿಟಿಯು ರಾಜ್ಯಮಟ್ಟದ ಅಂತರ್‌ಕಾಲೇಜು ಪವರ್ ಲಿಫ್ಟಿಂಗ್ ಸ್ಪರ್ಧೆ ಪುರುಷರ ವಿಭಾಗದಲ್ಲಿ ಚಾಂಪಿಯನ್‌ಶಿಪ್ ಗಳಿಸಿದ ನಿಟ್ಟೆ ಎನ್‌ಎಂಎಎಂಐಟಿ ಕಾಲೇಜು ತಂಡ.

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಆಯೋಜಿಸಲಾದ 19ನೇ ವಿಟಿಯು ರಾಜ್ಯಮಟ್ಟದ ಅಂತರ್‌ಕಾಲೇಜು ಪವರ್‌ಲಿಫ್ಟಿಂಗ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ನಿಟ್ಟೆ ಎನ್‌ಎಂಎಎಂಐಟಿ ಕಾಲೇಜು ಹಾಗೂ ಮಹಿಳಾ ವಿಭಾಗದಲ್ಲಿ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಚಾಂಪಿಯನ್ ಆಗಿ ಹೊರಹೊಮ್ಮಿದೆ.

» ವಿಟಿಯು ರಾಜ್ಯಮಟ್ಟದ ಅಂತರ್ ಕಾಲೇಜು ಪವರ್‌ಲಿಫ್ಟಿಂಗ್

ಶಿವಮೊಗ್ಗ ಜಿಎನ್‌ನ್‌ಸಿಇ, ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಹಾಗೂ ಸಂತ ಜೋಸೆಫ್ ಇಂಜಿನಿಯರಿಂಗ್ ಪುರುಷರ ವಿಭಾಗದಲ್ಲಿ ರನ್ನರ್‌ಅಪ್ ಸ್ಥಾನ ಪಡೆದವು. ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ರನ್ನರ್‌ಅಪ್ ಹಾಗೂ ಶಿವಮೊಗ್ಗ ಜಿಎನ್‌ನ್‌ಸಿಇ ಮಹಿಳಾ ವಿಭಾಗದಲ್ಲಿ ತೃತೀಯ ಸ್ಥಾನ ಗಳಿಸಿತು.

ವಿವಿಧ ಕಾಲೇಜುಗಳಿಂದ 140 ವಿದ್ಯಾರ್ಥಿಗಳು ಹಾಗೂ 45 ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಸಹ್ಯಾದ್ರಿ ಎಂಬಿಎ ವಿದ್ಯಾರ್ಥಿ ಶೋಭಿತ್ ರೈ ವಿಟಿಯು ಪವರ್ ಲಿಫ್ಟಿಂಗ್ ದಾಖಲೆಯಾಗಿದ್ದ 212.5 ಕೆ.ಜಿ.ಯನ್ನು ಮುರಿದು 217.5 ಕೆ.ಜಿ. ಎತ್ತಿ ಹೊಸ ದಾಖಲೆ ಬರೆದರು.

**ಉದ್ಘಾಟನೆ-ಸಮಾರೋಪ:** ಸೆ.28ಮತ್ತು 29ರಂದು ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಭಂಡಾರಿ ಫೌಂಡೇಶನ್ ಟ್ರಸ್ಟಿ ದೇವದಾಸ್ ಹೆಗ್ಡೆ ಪವರ್ ಲಿಫ್ಟಿಂಗ್ ಸ್ಪರ್ಧೆ ಉದ್ಘಾಟಿಸಿದರು. ಸಮಾರೋಪ ಸಮಾರಂಭದಲ್ಲಿ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಅಧ್ಯಕ್ಷ ಮಂಜುನಾಥ ಭಂಡಾರಿ ಬಹುಮಾನ ವಿತರಿಸಿದರು.

ಮಂಗಳವಾರ, ಅಕ್ಟೋಬರ್ 2, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 273 | ಪುಟ 18 + 2 + 4 • www.prajavani.net f /prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಕೃಷಿಕಣಜ
ಎರಡು ಎಕರೆಯಷ್ಟು ಪುಟ್ಟ ಜಮೀನಿನಲ್ಲಿ ದೊಡ್ಡ ಸಂಸಾರವನ್ನು ನಿಭಾಯಿಸುತ್ತಿರುವ ಚಿತ್ತಮ್ಮನ ಕೃಷಿ ಬದುಕು ಸಣ್ಣ ಹಿಡುವಳಿಯಲ್ಲೂ ಸುಸ್ಥಿರ ಜೀವನ ಸಾಧ್ಯ ಎಂಬುದಕ್ಕೆ ನಿದರ್ಶನ

### ವಿಟಿಯು ಅಂತರ ಕಾಲೇಜು ಪವರ್ ಲಿಫ್ಟಿಂಗ್ ಸ್ಪರ್ಧೆ

# ನಿಟ್ಟೆ, ಸಹ್ಯಾದ್ರಿ ಕಾಲೇಜಿಗೆ ಪ್ರಶಸ್ತಿ




ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಂತರ ಕಾಲೇಜು ಪವರ್ ಲಿಫ್ಟಿಂಗ್ ಸ್ಪರ್ಧೆ ನಡೆಯಿತು.

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಂತರ ಕಾಲೇಜು ಪವರ್ ಲಿಫ್ಟಿಂಗ್ ಸ್ಪರ್ಧೆಯ ಬಾಲಕರ ವಿಭಾಗದಲ್ಲಿ ನಿಟ್ಟೆ ಎನ್‌ಎಂಎಎಂಐಟಿ ಹಾಗೂ ಬಾಲಕಿಯರ ವಿಭಾಗದಲ್ಲಿ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಪ್ರಶಸ್ತಿ ಪಡೆದವು.

ಬಾಲಕಿಯರ ವಿಭಾಗದಲ್ಲಿ ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ (ಜಿಎಟಿ) ದ್ವಿತೀಯ ಹಾಗೂ ಜೆಎಸ್‌ಎಸ್‌ಸಿಇ ತೃತೀಯ ಸ್ಥಾನ ಪಡೆದವು. ಬಾಲಕರ ವಿಭಾಗದಲ್ಲಿ ನಗರದ ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜು ಹಾಗೂ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ರನ್ನರ್‌ಅಪ್ ಪ್ರಶಸ್ತಿ ಹಂಚಿಕೊಂಡವು.

ಈ ಸ್ಪರ್ಧೆಯಲ್ಲಿ 16 ಹೊಸ ದಾಖಲೆಗಳನ್ನು ಬರೆಯಲಾಯಿತು. ಕರ್ನಾಟಕದ ವಿವಿಧ ಎಂಜಿನಿಯರಿಂಗ್ ಕಾಲೇಜುಗಳಿಂದ ಒಟ್ಟು 140 ಬಾಲಕರು ಮತ್ತು 45 ಬಾಲಕಿಯರು ಪಾಲ್ಗೊಂಡಿದ್ದರು. ಸಹ್ಯಾದ್ರಿ ಎಂಬಿಎ ಕಾಲೇಜಿನ ವಿದ್ಯಾರ್ಥಿ ಶೋಬಿತ್ ರೈ, ಸ್ಕ್ವಾಟ್ ವಿಭಾಗದಲ್ಲಿ 215.5 ಕೆ.ಜಿ. ಯಷ್ಟು ತೂಕ ಎತ್ತಿ ತಮ್ಮ ಹಿಂದಿನ ದಾಖಲೆ ಮುರಿದರು.

ಭಂಡಾರಿ ಫೌಂಡೇಷನ್ ಟ್ರಸ್ಟಿ ದೇವದಾಸ್ ಹೆಗ್ಡೆ ಅವರು, ಪವರ್ ಲಿಫ್ಟಿಂಗ್ ಬಾರ್ ತೂಕವನ್ನು ಅನಾವರಣಗೊಳಿಸುವ ಮೂಲಕ ಸ್ಪರ್ಧೆ ಉದ್ಘಾಟಿಸಿದರು. ಸಮಾರೋಪ ಸಮಾರಂಭದಲ್ಲಿ ಭಂಡಾರಿ ಫೌಂಡೇಷನ್ ಅಧ್ಯಕ್ಷ ಮಂಜುನಾಥ್ ಭಂಡಾರಿ, ವಿಜೇತರಿಗೆ ಬಹುಮಾನ ವಿತರಿಸಿದರು.

Dr. Juneja's
ಪೇಟ್
ಸಫ
Natural Laxati
GRANULES & TA
24x7 Helpline : 0171-3